# ಪರಿಸರ ರಕ್ಷಣೆ ಕೋರ್ಟ್ ಆದ್ಯತೆ

**ಸಂ.ಕ. ಸಮಾಚಾರ ಬೆಂಗಳೂರು**

ಪರಿಸರ ರಕ್ಷಣೆಯಲ್ಲಿ ಕೆಲವರ ಪಾತ್ರ ಮಾತ್ರವಲ್ಲ ಎಲ್ಲರ ಪಾತ್ರವೂ ಮುಖ್ಯವಾಗುತ್ತದೆ ಎಂದು ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಸಿದ್ದಪ್ಪ ಸುನೀಲ್ ದತ್ ಯಾದವ್ ಅಭಿಪ್ರಾಯಪಟ್ಟರು.

ಸಿಎಂಆರ್ ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್‌ನಿಂದ ಪರಿಸರ ಅಧ್ಯಯನ ಕೇಂದ್ರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರದ ವಿಷಯದಲ್ಲಿ ನ್ಯಾಯಾಲಯಗಳು ಗಂಭೀರವಾದ ತೀರ್ಮಾನಗಳನ್ನು ಕೈಗೊಳ್ಳುತ್ತಿವೆ. ಪರಿಸರ ಹಾಳಾಗಲು ಅವಕಾಶ ನೀಡುವುದಿಲ್ಲ ಎಂದರಲ್ಲದೆ, ಎನ್‌ಜಿಓಗಳು ಹಾಗೂ ವಕೀಲರು ಕೂಡಾ ಪರಿಸರ ರಕ್ಷಣೆಯಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

2010ರ ನಂತರ ಪರಿಸರ ಸಮಸ್ಯೆಗಳಿಗೆ ಸಂಬಂಧಪಟ್ಟ ಪ್ರಕರಣಗಳನ್ನು, ನ್ಯಾಯಾಲಯವು ತ್ವರಿತವಾಗಿ ವಿಲೇವಾರಿ ಮಾಡಿದೆ ಎಂದು ಉದಾಹರಣೆ ಸಹಿತವಾಗಿ ಹೇಳಿ, ಇತ್ತೀಚೆಗೆ ದಿಲ್ಲಿಯಲ್ಲಿನ ವಾಯು ಮಾಲಿನ್ಯ ಮಾನವ ಸಂಕುಲಕ್ಕೆ ಎದುರಾದ ಜ್ವಲಂತ ಸಮಸ್ಯೆಗಳಿಗೆ ಸಾಕ್ಷಿಯಾಗಿದೆ. ಪರಿಸರಕ್ಕೆ ಇದೆಷ್ಟು ವಿನಾಶಕಾರಿಯಾಗಿದೆ ಅನ್ನುವುದನ್ನು ವಿವರಿಸಿದರು.

ಪರಿಸರವಾದಿ ಎ.ಎನ್. ಯಲ್ಲಪ್ಪ ರೆಡ್ಡಿ ಮಾತನಾಡಿ, ಇತ್ತೀಚೆಗೆ ಉತ್ತರಖಂಡದಲ್ಲಾದ ಪ್ರಾಕೃತಿಕ ದುರಂತದ ಬಗ್ಗೆ ವಿವರಿಸಿ, ಉತ್ತರಾಖಂಡದಲ್ಲಿ ದೇವದಾರ್ ಮರಗಳನ್ನು ಬ್ರಿಟಿಷರು ನೆಲಸಮ ಮಾಡಿದರು. ಇದು ವಿನಾಶಕ್ಕೆ ಹೇಗೆ ಕಾರಣವಾಯಿತು ಅನ್ನುವುದನ್ನು ವಿವರಿಸಿದರು. ಆಯಾ ಸಮುದಾಯಗಳಿಗೆ ತಾವು ವಾಸಿಸುವ ಪ್ರಬೇಧಗಳ ಜೀವ ವೈವಿಧ್ಯತೆಯನ್ನು ರಕ್ಷಿಸುವ ಜವಾಬ್ದಾರಿಯನ್ನು ನೀಡಲಾಯಿತು. ಆದರೆ ಅದರ ಜಾಡನ್ನು ಹಿಡಿದು ಟ್ರ್ಯಾಕ್ ಮಾಡುವಲ್ಲಿ ಸರ್ಕಾರಗಳು ವಿಫಲವಾದವು ಎಂದು ತೀವ್ರ ಅಸಮಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಐಎಫ್‌ಎಸ್ ಅಧಿಕಾರಿ ವಿಜಯ್ ಕುಮಾರ್ ಗೋಗಿ, ಹಾಗೂ ಸಿಎಂಆರ್ ಯೂನಿವರ್ಸಿಟಿ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ನ ಡೀನ್ ಪ್ರೊ. ಡಾ.ಟಿ.ಆರ್ ಸುಬ್ರಮಣ್ಯ, ಉಪ ಪ್ರಾಂಶುಪಾಲ ಪ್ರೊ. ವಿ.ಜೆ.ಪ್ರಾಣೇಶ್ವರನ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ Wed, 17 February 2021
epaper.samyukthakarnataka.com